# ಶ್ರೀ ವಿಜಯೀಂದ್ರರು ಬರೆದ ಅದ್ವೈತಸಿದ್ಧಿಯ ಖಂಡನೆಯನ್ನು ಸತ್ಯಾತ್ಮರು ಓದಿಲ್ಲವೇ?

ಶ್ರೀಮಚ್ಚಂದ್ರಿಕಾಚಾರ್ಯರಿಗೆ ಇಳಿವಯಸ್ಸಾಗಿದ್ದಾಗ ಮಧುಸೂದನ ಸರಸ್ವತಿ ನ್ಯಾಯಾಮೃತಕ್ಕೆ ಖಂಡನೆ ಬರೆದನೆಂದೂ, ಅದನ್ನು ಓದುವಷ್ಟು ಸ್ಥಿತಿಯೂ ವ್ಯಾಸರಾಜಗುರುಸಾರ್ವಭೌಮರಿಗೆ ಇರಲಿಲ್ಲವೆಂದೂ, ಅವರ ಶಿಷ್ಯರಿಗೂ ಉತ್ತರ ನೀಡಲಿಕ್ಕೆ ಸಾಧ್ಯವಾಗಲಿಲ್ಲವೆಂದೂ ಆಗ ಶ್ರೀ ವ್ಯಾಸರಾಜರು ತಮ್ಮ ಶಿಷ್ಯರನ್ನು ಶ್ರೀ ರಘೂತ್ತಮ ಸ್ವಾಮಿಗಳ ಬಳಿಗೆ ಕಳುಹಿಸಿದರೆಂದೂ ಅವರು ತಮ್ಮ ಶಿಷ್ಯರ ಮುಖಾಂತರ ಬರೆಯಿಸಿದರೆಂದೂ ಉತ್ತರಾದಿಮಠ ಹೇಳುವ ಕಥೆ ಸುಳ್ಳು ಎನ್ನುವದನ್ನು ಹಿಂದಿನ ಲೇಖನಗಳಲ್ಲಿ ಪ್ರತಿಪಾದಿಸಿದ್ದೇನೆ.

ಶ್ರೀ ವ್ಯಾಸರಾಜರು ನಿರ್ಯಾಣ ಹೊಂದಿದ್ದು, 1539ರಲ್ಲಿ, ಮಧುಸೂದನಸರಸ್ವತಿ ಹುಟ್ಟಿದ್ದೇ

1540ರಲ್ಲಿ, ಶ್ರೀ ರಘೂತ್ತಮರು ಹುಟ್ಟಿದ್ದೂ ಸಹಿತ 1547ರಲ್ಲಿ ಎಂದು ಪ್ರಮಾಣಗಳ ಸಮೇತ ಪ್ರತಿಪಾದಿಸಿ ಅದು ಸುಳ್ಳು ಕಥೆ ಎನ್ನುವದುನ್ನು ಸಾಬೀತು ಪಡಿಸಿದ್ದೇನೆ.

ಈಗ ಮುಂದಿನ ಪ್ರಶ್ನೆ.

**ಕಥೆ ಸುಳ್ಳೋ ಸತ್ಯವೋ ಬೇಡ. ಉತ್ತರ ನೀಡಿದವರು ಮಾತ್ರ ರಘೂತ್ತಮರ ಶಿಷ್ಯರೇ ತಾನೆ. ಎಂದು ನರಹರಿ ಸುಮಧ್ವ ಪ್ರಶ್ನೆ ಮಾಡಿದ್ದಾರೆ. ವಿಜಯೀಂದ್ರರು ಅಪ್ಪಯ್ಯದೀಕ್ಷಿತನಿಗೆ ಉತ್ತರ ನೀಡಿದರು ಎಂದು ಹೇಳಿದ್ದಾರೆ. ಅಂದರೆ ಮಧುಸೂದನಸರಸ್ವತಿಗೆ ಉತ್ತರ ನೀಡಿಲ್ಲ ಎಂದು ಪರೋಕ್ಷವಾಗಿ ಸೂಚನೆ ಮಾಡಿದ್ದಾರೆ[1].**

ಕಟ್ಟುಕಥೆಗಳ ಪ್ರಭಾವ ಹೇಗಿರುತ್ತೆ ಎನ್ನುವದಕ್ಕೆ ಈ ಪ್ರಶ್ನೆ ಜ್ವಲಂತ ಸಾಕ್ಷಿ.

---

[1] ನರಹರಿಯವರ ಪ್ರಶ್ನೆಗಳು ಈ ರೀತಿ ಶಬ್ದಗಳಿಲ್ಲ. ಅದರ ಅಭಿಪ್ರಾಯ-ವನ್ನು ಸಂಗ್ರಹಿಸಿದ್ದೇನೆ. ಇದು ಅವರ ಅಭಿಪ್ರಾಯವಲ್ಲದಿದ್ದರೆ ಅವರ ಬಳಿ ಈಗಲೇ ಕ್ಷಮೆಯಾಚಿಸುತ್ತೇನೆ. ಆಗ ಇದನ್ನು ನಾನೇ ಪ್ರಶ್ನೆ ಮಾಡಿ ಉತ್ತರ ನೀಡಿದ್ದೇನೆ ಎಂದು ಓದುಗರು ಗ್ರಹಿಸಬೇಕು ಎಂದು ವಿನಂತಿಸುತ್ತೇನೆ.

ಕೆಲವರಲ್ಲಿ ಹಿಂದಿನಿಂದಲೂ ಹೀಗೆಯೇ. ತಾವು ಮಾಡಿದ ಕೆಲಸವನ್ನು ಕೆಲವರು ಹೆಚ್ಚಿಗೆ ಪ್ರಚಾರಕ್ಕೆ ತರುತ್ತಾರೆ. ಆದರೆ ಬೇರೆಯವರು ಆ ಕಾರ್ಯ ಮಾಡಿದ್ದಾರೆ ಎನ್ನುವದನ್ನು ಹೇಳುವ ಪದ್ಧತಿಯೇ ಇಲ್ಲ.

1919 ರಲ್ಲಿ ಚಂದ್ರಿಕಾಗ್ರಂಥಕ್ಕೆ ಖಂಡನೆ ಬಂದಾಗ 1920ರಲ್ಲಿಯೇ ಅದಕ್ಕೆ ಚಂದ್ರಿಕಾಪ್ರಕಾಶಪ್ರಸರ ಎಂಬ ದಿವ್ಯ ಉತ್ತರವನ್ನು[2] ಬರೆದು 1921ರಲ್ಲಿ ಪ್ರಕಟ ಮಾಡಿದವರು ಪರಮಪೂಜ್ಯ ಶ್ರೀ ಗೌಡಗೆರೆ ವೆಂಕಟರಮಣಾಚಾರ್ಯರು. ಅಷ್ಟೇ ಅಲ್ಲ, ಆ ನಂತರ ಬಂದ ಅದ್ವೈತದೀಪಿಕಾಕ್ಕೆ ಯಾರೂ ಉತ್ತರ ನೀಡಲಿಲ್ಲ. ಅದ್ವೈತದೀಪಿಕಾವಾತಾಗಮ ಎಂಬ  ಪುಸ್ತಕ ಬರೆದು ಅದಕ್ಕೂ ತಕ್ಷಣ ಉತ್ತರ ನೀಡಿದವರು ಶ್ರೀ ಗೌಡಗೆರೆ ಆಚಾರ್ಯರು.

ಶ್ರೀ ಗೌಡಗೆರೆ ಆಚಾರ್ಯರ ನಿರ್ಯಾಣವಾದದ್ದೇ 1925ರಲ್ಲಿ. ಅಷ್ಟರ ಒಳಗೆ ಬಂದ ಎರಡೂ

---

[2] ಪರಮತೀಯ ಗ್ರಂಥದಲ್ಲಿ ಕೇವಲ ಅಪಸಿದ್ಧಾಂತಗಳನ್ನು ತೋರಿಸಿದ್ದಲ್ಲ. ಅವರ ಪ್ರತಿಯೊಂದು ಯುಕ್ತಿಯಲ್ಲಿನ ದೋಷಗಳನ್ನು ತೋರಿಸಿದ ಗ್ರಂಥ ಚಂದ್ರಿಕಾಪ್ರಕಾಶಪ್ರಸರ.

ಗ್ರಂಥಗಳಿಗೂ ಉತ್ತರ ನೀಡಿ ಇಷ್ಟು ಮಹತ್ತರ ಕಾರ್ಯಗಳನ್ನು ಮಾಡಿ ಹೋದ ಮಹಾನುಭಾವರು ಅವರು. ಅವರನ್ನು ನೆನೆಸುವವರು ಎಷ್ಟು ಜನ ಇದ್ದಾರೆ.

**ಮತ್ತೂ ಇವತ್ತು ಅನೇಕ ಜನ ಮಾತನಾಡುವದನ್ನು ನೀವು ಕೇಳಿದ್ದೀರ. ವ್ಯಾಸತ್ರಯವನ್ನು ಉಳಿಸಿರುವದೇ ನಾವು ಎನ್ನುತ್ತಾರೆ.**

**ವ್ಯಾಸತ್ರಯ ನಮ್ಮನ್ನು ಉಳಿಸಿದೆ ಎನ್ನುವದು ವಿನಯವೋ,  ನಾವು ವ್ಯಾಸತ್ರಯವನ್ನು ಉಳಿಸಿದ್ದೇವೆ ಎನ್ನುವದು ವಿನಯವೋ ನೀವೇ ನಿರ್ಧರಿಸಿ.**

**ಶ್ರೀಮದಾಚಾರ್ಯರ ಪೀಠದಲ್ಲಿ ಬಂದವರು ನಾವು ಎನ್ನಬೇಕೋ, ನಮ್ಮ ಪೀಠದಲ್ಲಿ ಶ್ರೀಮದಾಚಾರ್ಯರು ಬಂದಿದ್ದಾರೆ ಎನ್ನಬೇಕೋ ನೀವೆ ನಿರ್ಧರಿಸಿ.**

ಈ ಮಾತು ಯಾಕೆ ಹೇಳಿದೆ ಎಂದರೆ, ಶ್ರೀ ಗೌಡಗೆರೆ ಆಚಾರ್ಯರು ತಮ್ಮ ಗ್ರಂಥಕ್ಕೆ ಇಟ್ಟ ಹೆಸರು ಸಹಿತ ಎಷ್ಟು ವಿನಯದಿಂದ ಕೂಡಿದೆ ಎಂದು ತಿಳಿಸಲು.

ಅವರಿಟ್ಟ ಹೆಸರು ಚಂದ್ರಿಕಾಪ್ರಕಾಶಪ್ರಸರಃ. ಅಂದರೆ ಚಂದ್ರಿಕಾಗ್ರಂಥದ ಏನು ಬೆಳಕಿದೆ ಅದನ್ನು ಈ ಗ್ರಂಥದಲ್ಲಿ ಹರಿಸಲಾಗಿದೆ ಎಂದರ್ಥ. ಅರ್ಥಾತ್, ಚಂದ್ರಿಕಾ ಗ್ರಂಥದ ಕುರಿತು ಬಂದ ಆಕ್ಷೇಪಗಳಿಗೆ ಚಂದ್ರಿಕಾಗ್ರಂಥದಲ್ಲಿಯೇ ಉತ್ತರಗಳಿವೆ. ಅದನ್ನೇ ತೋರಿಸುತ್ತೇನೆ ಎಂಬ ವಿನಯವನ್ನು ಇಲ್ಲಿ ಶ್ರೀ ಗೌಡಗೆರೆ ಆಚಾರ್ಯರು ತೋರಿದ್ದಾರೆ.

ಈ ಪವಿತ್ರ ಸಂಪ್ರದಾಯವನ್ನು ತೋರಿಕೊಟ್ಟವರು ಶ್ರೀ ವಿಜಯೀಂದ್ರಗುರುಸಾರ್ವಭೌಮರು.

ನ್ಯಾಯಾಮೃತಕ್ಕೆ ಅದ್ವೈತಸಿದ್ಧಿ ಖಂಡನೆ ಬಂದಾಗ ಶ್ರೀಮಚ್ಚಂದ್ರಿಕಾಚಾರ್ಯರ ಶಿಷ್ಯರು ಉತ್ತರ ನೀಡಲಿಲ್ಲ ಎನ್ನುವದು ಒಂದು ಮಹತ್ತರ ಭ್ರಮೆ. ವ್ಯವಸ್ಥಿತವಾಗಿ ಸಾಮಾನ್ಯ ಜನರ ಮಧ್ಯದಲ್ಲಿ ಹುಟ್ಟುಹಾಕಿರುವ ಭ್ರಮೆ.

ಶ್ರೀಮಚ್ಚಂದ್ರಿಕಾಚಾರ್ಯರಲ್ಲಿಯೇ ರಾಮಶಬ್ದದಿಂದ ಆರಂಭಿಸಿ ಅಧ್ಯಯನ ಮಾಡಿದ, ಆ ಚಂದ್ರಿಕಾಚಾಯರ ಮುಖದಿಂದಲೇ ಸಮಗ್ರ

ಸಟೀಕಸರ್ವಮೂಲಗಳನ್ನು, ವ್ಯಾಸತ್ರಯವನ್ನು ಅಧ್ಯಯನ ಮಾಡಿದ ಮಹಾನುಭಾವರು. ಯಾರ ವಿದ್ವತನ್ನು ಕಂಡು ಬಹುವಾಗಿ ಮೆಚ್ಚಿ ಇವರನ್ನು ನಮ್ಮ ಸಂಸ್ಥಾನಕ್ಕೆ ನೀಡಿ ಎಂದು ಶ್ರೀ ಸುರೇಂದ್ರತೀರ್ಥ ಶ್ರೀಪಾದಂಗಳವರು ಶ್ರೀ ವ್ಯಾಸರಾಜರನ್ನು ಕೇಳಿದರೋ ಅಂತಹ ಜ್ಞಾನಿಮೂರ್ಧನ್ಯರು ಶ್ರೀ ವಿಜಯೀಂದ್ರರು.

ಅಂತಹ ಗುರುಗಳು ನ್ಯಾಯಾಮೃತದ ಮೇಲೆ ಅಕ್ಷೇಪ ಬಂದಾಗ ಉತ್ತರ ನೀಡಲಿಲ್ಲವೇ?

ಅವಶ್ಯವಾಗಿ ನೀಡಿದ್ದಾರೆ. ಲಘ್ವಾಮೋದ ಎಂದು ಆ ಗ್ರಂಥದ ಹೆಸರು. ಪ್ರಕಟವೂ ಆಗಿದೆ.

ಅಷ್ಟೇ ಅಲ್ಲ, ವಿಜಯೀಂದ್ರಸ್ವಾಮಿಗಳು ಮೊದಲಿಗೆ ಅತ್ಯಂತ ವಿಸ್ತಾರವಾದ ಆಮೋದ ರಚಿಸುತ್ತಾರೆ. ಅದು ಗುರ್ವಾಮೋದ. ಆ ನಂತರ ಅಲ್ಲಿನ ಎಲ್ಲ ವಿಷಯಗಳನ್ನೂ ಕ್ರೋಢೀಕರಿಸಿ ಅದ್ಭುತವಾದ ಲಘ್ವಾಮೋದವನ್ನು ರಚಿಸುತ್ತಾರೆ.

ಆ ಗ್ರಂಥದ ಆರಂಭದಲ್ಲಿಯೇ ಶ್ರೀ ವಿಜಯೀಂದ್ರಸ್ವಾಮಿಗಳು ಹೇಳುತ್ತಾರೆ —

**ವ್ಯಾಖ್ಯಾನವ್ಯಾಜತಃ**
**ಅನ್ಯೋಕ್ತದೂಷಣಾನಾಮಲಗ್ನತಾಮ್**
**ಪ್ರದರ್ಶ್ಯ ಗುರುಪಾದೋಕ್ತಿ-**
**ಮಹಿಮಾತ್ರ ಪ್ರಕಾಶ್ಯತೇ**

ಇದರ ಅಭಿಪ್ರಾಯ ಹೀಗಿದೆ — ನ್ಯಾಯಾಮೃತಕ್ಕೆ ನಾನು ಬರೆಯುತ್ತಿರುವ ಈ ವ್ಯಾಖ್ಯಾನದ ಮುಖಾಂತರವೇ ಬೇರೆಯವರು ಮಾಡಿರುವ ಆಕ್ಷೇಪಗಳು ನ್ಯಾಯಾಮೃತವನ್ನು ಬಾಧಿಸುವದೇ ಇಲ್ಲ ಎನ್ನುವದನ್ನು ತೋರಿಸುತ್ತೇನೆ. (**ಅನ್ಯೋಕ್ತ** ಬೇರೆಯವರು ಹೇಳಿದ **ದೂಷಣಾನಾಂ** ಖಂಡನೆಗಳು **ಅಲಗ್ನತಾಂ** ಅಸಂಬದ್ಧ ಎನ್ನುವದನ್ನು ತೋರಿಸಿ) ಆ ಮುಖಾಂತರವೇ ಶ್ರೀವ್ಯಾಸರಾಜಗುರುಚರಣರ ಮಾತಿನ ಮಾಹಾತ್ಮ್ಯವನ್ನು ಅರ್ಥಾತ್ ಬೇರೆಯವರು ಮಾಡಿರುವ ಆಕ್ಷೇಪಗಳಿಗೆ ಚಂದ್ರಿಕಾಚಾರ್ಯರೇ ನ್ಯಾಯಾಮೃತದಲ್ಲಿಯೇ ಉತ್ತರ ನೀಡಿದ್ದಾರೆ ಎಂಬ ಮಾಹಾತ್ಮ್ಯವನ್ನು ತೋರಿಸುತ್ತೇನೆ.

ನೋಡಿ ಎಷ್ಟು ವಿನಯವಿದೆ ಶ್ರೀ ವಿಜಯೀಂದ್ರಗುರುಸಾರ್ವಭೌಮರಲ್ಲಿ. ಅವರು ನಾನು ನ್ಯಾಯಾಮೃತವನ್ನು ಉಳಿಸುತ್ತೇನೆ ರಕ್ಷಿಸುತ್ತೇನೆ ಎನ್ನಲಿಲ್ಲ. ನ್ಯಾಯಾಮೃತದಲ್ಲಿ ಉತ್ತರವಿದೆ, ಆ ಉತ್ತರಗಳನ್ನೇ ತೋರಿಸಿ ಆ ಗುರುಚರಣರ ಮಾತಿನ ಮಾಹಾತ್ಮ್ಯವನ್ನು ತೋರಿಸುತ್ತೇನೆ ಎಂದರು.

**ಅಂದರೆ, ಮುಂದೆ ಬರಲಿರುವ ಎಲ್ಲ ಅಕ್ಷೇಪಗಳನ್ನು ತಿಳಿದೇ, ಅದಕ್ಕೆ ಉತ್ತರವನ್ನು ಹೊಂದಿದಂತೆಯೇ ಶ್ರೀ ಚಂದ್ರಿಕಾಚಾರ್ಯರು ಗ್ರಂಥವನ್ನು ರಚಿಸಿದ್ದಾರೆ ಎನ್ನುವದನ್ನು ಶ್ರೀ ವಿಜಯೀಂದ್ರರು ತಿಳಿಸಿದರು. ತಿಳಿಸಿದ್ದಷ್ಟೇ ಅಲ್ಲ ತಮ್ಮ ಗ್ರಂಥದಲ್ಲಿ ಅದನ್ನು ಪರಮಾದ್ಭುತವಾದ ಕ್ರಮದಲ್ಲಿ ಪ್ರತಿಪಾದಿಸಿ ತೋರಿಸಿದ್ದಾರೆ ಸಹಿತ.**

ಅದನ್ನೇ ಗೌಡಗೆರೆ ಆಚಾರ್ಯರೂ ಅನುಸರಿಸಿದರು. ನಾನು ಚಂದ್ರಿಕೆಯ ರಕ್ಷಣೆ ಮಾಡಿದೆ ಎನ್ನಲಿಲ್ಲ. ಚಂದ್ರಿಕೆಯಲ್ಲಿರುವ ಉತ್ತರವನ್ನೇ ನೀಡಿದ್ದೇನೆ ಎಂದರು. ಪ್ರಾಚಾಮುಪಜೀವ್ಯ ಸರಸ್ವತೀಂ ಎಂದು.

ಈಗ ಹೇಳಿ, ನ್ಯಾಯಾಮೃತಕ್ಕೆ ಖಂಡನೆ ಬಂದಿದೆ, ಅದನ್ನು ಓದುವ ಸ್ಥಿತಿಯೂ ವ್ಯಾಸರಾಜರಿಗೆ ಇರಲಿಲ್ಲ, ಶಿಷ್ಯರಿಗೂ ಸಾಧ್ಯವಾಗಲಿಲ್ಲ ಎಂಬ ಕಥೆ ಸುಳ್ಳೋ ಸತ್ಯವೋ ಎಂದು.

**ಸುಳ್ಳು ಕಥೆಯನ್ನು ಹೇಳುವ ಜನ ವಿಜಯೀಂದ್ರರ ಗ್ರಂಥವನ್ನು ಓದಿದ್ದಾರಾ? ಅಥವಾ ಓದಿದ್ದರೂ ಸೂರ್ಯಪ್ರಕಾಶದಷ್ಟು ಸುಸ್ಪಷ್ಟವಾಗಿರುವ ವಿಷಯವನ್ನು ಮರೆಮಾಚುವ ಹುನ್ನಾರ ಯಾಕೆ?**

ಸಾವಧಾನವಾಗಿ ಯೋಚಿಸಿ.

ಇನ್ನೂ ಅದ್ಭುತ ವಿಷಯ ಏನು ಗೊತ್ತಾ? ಅದ್ವೈತಸಿದ್ಧಿಯಲ್ಲಿ ಏನು ಆಕ್ಷೇಪಗಳಿವೆ, ಆ ಆಕ್ಷೇಪಗಳ ಮೂಲಕ್ಕೆ ಹೋಗಿ ಪರಮಾದ್ಭುತ ಉತ್ತರಗಳನ್ನು ನೀಡಿದವರು ಶ್ರೀ ವಿಜಯೀಂದ್ರರು. ಇದನ್ನು ಬಾಯಿಮಾತಿನಲ್ಲಿ ಹೇಳಿದರೆ ಸಾಕಾಗುವದಿಲ್ಲ. ಈ ವರ್ಷ ಶ್ರೀ ಅಕ್ಷೋಭ್ಯ-ತೀರ್ಥಗುರುಸಾರ್ವಭೌಮರ ಆರಾಧನೆಯ ದಿವಸದಿಂದ ಸಮಗ್ರ ತತ್ವಮಸಿ ವಾಕ್ಯಾರ್ಥವನ್ನು ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ

ಬರೆದು ನೀಡುತ್ತೇನೆ, ಉಪನ್ಯಾಸ ಮಾಡುತ್ತೇನೆ. ಆ ಸಂದರ್ಭದಲ್ಲಿ ಶ್ರೀಮದಾಚಾರ್ಯರಿಂದ ಆರಂಭಿಸಿ ಎಲ್ಲ ಮಹಾನುಭಾವರ ವಾಗ್ವೈಭವದ ಚಿತ್ರಣವನ್ನು ಗುರ್ವನುಗ್ರಹದಿಂದ ನೀಡಲು ಪ್ರಯತ್ನಿಸುತ್ತೇನೆ. ಆ ಸಂದರ್ಭದಲ್ಲಿ ತಿಳಿಯುತ್ತದೆ, ಶ್ರೀ ವಿಜಯೀಂದ್ರಗುರುಸಾರ್ವಭೌಮರು ಎಷ್ಟು ಅದ್ಭುತವಾದ ವ್ಯಾಖ್ಯಾನವನ್ನು ರಚಿಸಿದ್ದಾರೆ ಎನ್ನುವದು.

ಕೇವಲ ಅದ್ವೈತಸಿದ್ಧಿಯಲ್ಲ, ಅದ್ವೈತಸಿದ್ಧಿಯಲ್ಲಿನ ಪ್ರತಿಪಾದನೆಗಳ ನಂತರವೂ ಬರುವ ಆಕ್ಷೇಪಗಳಿಗೆ, ಆ ಆಕ್ಷೇಪಗಳ ಮೂಲಕ್ಕೇ ಕುಠಾರಪ್ರಯೋಗ ಮಾಡಿದವರು ಶ್ರೀ ವಿಜಯೀಂದ್ರುಗುರುಸಾರ್ವಭೌಮರು.

ವಿಜಯೀಂದ್ರರು ವ್ಯಾಸರಾಜರ ಶಿಷ್ಯರು ಎನ್ನುವ ವಿಷಯದಲ್ಲಿ ಸಂದೇಹವಿದೆಯಾ?

ಆ ಮಹಾಗುರುಗಳು **"ಅನ್ಯೋಕ್ತಿದೂಷಣಾನಾ-ಮಲಗ್ನತಾಂ ಪ್ರದರ್ಶ್ಯ"** ಎಂದು ಅಂದರೆ ಬೇರೆಯವರ ದೂಷಣಗಳೂ ಅಸಂಬದ್ಧ ಎಂದು

ತೋರಿಸುತ್ತೇವೆ ಎಂದು ಪ್ರತಿಜ್ಞೆ ಮಾಡಿ ಉತ್ತರ ನೀಡಿದ ನಂತರವೂ ವ್ಯಾಸತ್ರಯವನ್ನು ಉಳಿಸಿದವರು ನಾವೇ ಎಂಬ ಮಾತನ್ನು ಆಡುತ್ತಾರಲ್ಲಾ, ಅದು ಸತ್ಯವೋ, ಸುಳ್ಳೋ, ವಿನಯವೋ ಅಹಂಕಾರವೋ ನೀವೇ ನಿರ್ಧರಿಸಿ.

ಈ ಯಾವುದರ ತಿಳುವಳಿಕೆಯಿಲ್ಲದ, ಬೇರೆಯವರು ಹೇಳಿದ ಕಥೆಗಳನ್ನೇ ನಂಬಿದ ನರಹರಿ ಸುಮಧ್ವ ಮುಂತಾದ ಸಜ್ಜನರೂ ಸಹಿತ ರಘೂತ್ತಮರ ಶಿಷ್ಯರು ಉತ್ತರ ನೀಡಿದ್ದು ದಿಟವಲ್ಲವೇ, ವಿಜಯೀಂದ್ರರು ಅಪ್ಪಯ್ಯದೀಕ್ಷಿತರಿಗೆ ಉತ್ತರ ನೀಡಿದರು ಮುಂತಾದ ಮಾತುಗಳನ್ನು ಆಡಿದ್ದು ಆ ಸುಳ್ಳುಕಥೆಗಳ ಪ್ರಭಾವವನ್ನು ತೋರಿಸುತ್ತದೆ. ಇರುವ ಸತ್ಯವನ್ನು ಮರೆಮಾಚುವ ಉತ್ತರಾದಿಮಠದವರ ಹುನ್ನಾರವನ್ನು ಬಯಲಿಗೆಳೆಯುತ್ತದೆ.

ಯಾಕೆ, ಸತ್ಯಾತ್ಮರು ಆಮೋದವನ್ನು ಓದಿಲ್ಲವೇ. ಅದರ ಪರಮಾದ್ಭುತ ಗಾಂಭೀರ್ಯವನ್ನು ಕಂಡಿಲ್ಲವೇ. ನಿರ್ಮತ್ಸರರಾಗಿ ಅದನ್ನು ಹೇಳಬೇಕಾಗಿದ್ದದ್ದು ಅವರ ಕರ್ತವ್ಯವಲ್ಲವೇ.

ಇತಿಹಾಸವನ್ನು ಹೇಳುವದಕ್ಕಿಂತ ಮುಂಚೆ ಅದನ್ನು ಧೃಢೀಕರಿಸಿಕೊಂಡು ಹೇಳಬೇಕಾದ್ದು ಅವರ ಕರ್ತವ್ಯವಲ್ಲವೇ.

ಶ್ರೀಮದ್ ವ್ಯಾಸರಾಜಗುರುಸಾರ್ವಭೌಮರ ಪರಮಪ್ರೇಮಾಸ್ಪದ ಶಿಷ್ಯರಾದ ಶ್ರೀ ವಿಜಯೀಂದ್ರಗುರುರಾಜರು ಅದ್ವೈತಸಿದ್ಧಿಗೆ ಉತ್ತರವನ್ನು ನೀಡಿರುವ ಗ್ರಂಥ ಇರುವಾಗ, ಸತ್ಯಾತ್ಮರ ಸಂನ್ಯಾಸಕ್ಕಿಂತಲೂ ಐದು ವರ್ಷಗಳ ಮುಂಚೆ ಅವರು ವ್ಯಾಸತ್ರಯ ಸುಧಾ ಓದುವ ಸಂದರ್ಭದಲ್ಲಿಯೇ ಅದು ಮುದ್ರಣವಾಗಿರುವಾಗ (1991) ಅದನ್ನು ಮರೆಮಾಚುವ ಪ್ರಯತ್ನ ಏಕೆ. ನೀವೇ ಹೇಳಿ.

**ವಿಜಯೀಂದ್ರರು ಕೇವಲ ಅದ್ವೈತಸಿದ್ಧಿಗೆ ಉತ್ತರ ನೀಡಿದ್ದಲ್ಲ. ಯಾರೂ ಉತ್ತರ ನೀಡದ ಮಧುಸೂದನ ಸರಸ್ವತಿಯ ಮತ್ತೊಂದು ಗ್ರಂಥಕ್ಕೂ ಉತ್ತರ ನೀಡಿದವರು ಶ್ರೀ ವಿಜಯೀಂದ್ರಗುರು-ಸಾರ್ವಭೌಮರು.**

**ಮಧುಸೂದನಸರಸ್ವತಿ ಗೂಡಾರ್ಥದೀಪಿಕಾ ಎಂಬ ಗ್ರಂಥವನ್ನು ಬರೆದಿದ್ದಾರೆ. ಭಗವದ್ಗೀತೆಗೆ ಅದ್ವೈತಪರವಾದ ಅರ್ಥವನ್ನು ತಿಳಿಸುವ ಕೃತಿ. ಅದನ್ನೂ ಖಂಡಿಸಿ ಗ್ರಂಥವನ್ನು ಬರೆದವರು ಶ್ರೀ ವಿಜಯೀಂದ್ರಗುರುಸಾರ್ವಭೌಮರು.**

ಹೀಗೆ ಚಂದ್ರಿಕಾಚಾರ್ಯರಿಗೆ ಹಾಗೂ ಅವರ ಶಿಷ್ಯರಿಗೆ ಅದ್ವೈತಸಿದ್ಧಿಗೆ ಉತ್ತರ ನೀಡಿಲಿಕ್ಕಾಗಲಿಲ್ಲ ಎನ್ನುವದು ಕೆಲವರ ಭ್ರಮೆಯಷ್ಟೇ.

ಮತ್ತೂ, ಚಂದ್ರಿಕಾಚಾರ್ಯರು ಅವರ ಶಿಷ್ಯರನ್ನು ಕಡಿಮೆ ಮಾಡಿ ಶ್ರೀ ರಘೂತ್ತಮರ ಮಾಹಾತ್ಮ್ಯವನ್ನು ಹೇಳಬೇಕಾ?

ಶ್ರೀ ರಘೂತ್ತಮರ ಮಾಹಾತ್ಮ್ಯ ಎಲ್ಲಿದೆ ಗೊತ್ತೇ. ಅವರು ತತ್ವಪ್ರಕಾಶಿಕಾಕ್ಕೆ ವ್ಯಾಖ್ಯಾನ ಮಾಡುವಾಗ ಅತಃ ಎನ್ನುವ ಶಬ್ದದ ಅರ್ಥವನ್ನು ಸಂಗ್ರಹಿಸಿ-ದ್ದಾರಲ್ಲ ಆ ರೀತಿಯ ಅವರ ನೂರಾರು ವಾಕ್ಯಗಳಲ್ಲಿದೆ. ಏನದ್ಭುತವಾದ ಸಂಗ್ರಹ! ವ್ಯಾಸರಾಜರ ಕಾಲಕ್ಕೆ ಇನ್ನೂ ಹುಟ್ಟದೇ ಇರುವ ರಘೂತ್ತಮರ ಕುರಿತು ಕಥೆ ಹುಟ್ಟಿಸಬೇಕಾಗಿಲ್ಲ.

ಅವರ ಮಾಹಾತ್ಮ್ಯ ಅವರ ಗ್ರಂಥಗಳಲ್ಲಿದೆ. ಪಂಡಿತಗೋಚರವಾದ ಮಾಹಾತ್ಮ್ಯ.

ಅಷ್ಟೇ ಅಲ್ಲ, ಅವರ ವೃಂದಾವನವನ್ನು ಸೇವೆ ಮಾಡಿ ಅಭೀಷ್ಟಗಳನ್ನು ಪಡೆಯುತ್ತಿರುವ ಸಾವಿರಾರು ಪಂಡಿತ ಪಾಮರ ಜನರೇ ಆ ರಘೂತ್ತಮರ ಮಾಹಾತ್ಮ್ಯಕ್ಕೆ ಸಾಕ್ಷಿಯಾಗಿ ನಿಂತಿದ್ದಾರೆ. ಇಂತಹ ಮಹಾನುಭಾವರಿಗೆ ಪುಳ್ಳುಕಥೆಗಳಿಂದ ಮಾಹಾತ್ಮ್ಯ ಹೇಳಿದರೆ ಅದು ಅಪಚಾರವಲ್ಲವೇ. ಸಾವಧಾನವಾಗಿ ಯೋಚಿಸಿ.

**ಚಂದ್ರಿಕಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ವಿಜಯೀಂದ್ರಗುರುರಾಜರು ಅದ್ವೈತಸಿದ್ಧಿಗೆ ಉತ್ತರವನ್ನು ನೀಡಿದ್ದರೂ ಅದನ್ನು ಮರೆಮಾಚುವದು ಸತ್ಯಾತ್ಮರಂತಹ ವಿದ್ವಾಂಸಯತಿಗಳಿಗೆ ಶೋಭೆಯೇ?**

**ಪುಳ್ಳುಕಥೆಗಳನ್ನು ಸಣ್ಣ ಜನ ಹೇಳಿದರೆ ಉಪೇಕ್ಷೆ ಮಾಡಬಹುದು. ದೊಡ್ಡವರು ಹೇಳಿದಾಗ ಉಪೇಕ್ಷೆ ಮಾಡಬೇಕೆ.**

ಈ ಲೇಖನಗಳಲ್ಲಿ ಶ್ರೀ ವಿಜಯೀಂದ್ರರು ಅದ್ವೈತಸಿದ್ಧಿಗೆ ಉತ್ತರ ನೀಡಿದ್ದಾರೆ ಎಂದಷ್ಟೇ ಪ್ರತಿಪಾದಿಸಿದ್ದೇನೆ. ಮುಂದೆ ನ್ಯಾಯಾಮೃತದ ಅನುವಾದದ ಸಂದರ್ಭದಲ್ಲಿ ಆ ಉತ್ತರಗಳ ಮಾಹಾತ್ಮ್ಯವನ್ನು ನನ್ನ ಯೋಗ್ಯತೆಯಂತೆ ತಿಳಿಸಲು ಪ್ರಯತ್ನಿಸುತ್ತೇನೆ.

**ಇನ್ನು ಯಾವುದಾದರೂ ವಿದ್ವಾಂಸರು ಶ್ರೀ ವಿಜಯೀಂದ್ರಗುರುಸಾರ್ವಭೌಮರ ವ್ಯಾಖ್ಯಾನದಲ್ಲಿ ಅದ್ವೈತಸಿದ್ಧಿಯ ಖಂಡನೆಯಿಲ್ಲ ಎಂದು ಹೇಳುವ ಧೈರ್ಯವಿದ್ದರೆ ಹೇಳಲಿ.**

ಅದ್ವೈತಸಿದ್ಧಿಯ ವಾಕ್ಯಗಳು, ಅದರ ಅಭಿಪ್ರಾಯ, ಬೇರೆ ವ್ಯಾಖ್ಯಾನಗಳಲ್ಲಿ ಅವುಗಳ ಖಂಡನೆ ಬಂದಿರುವ ರೀತಿ, ಶ್ರೀವಿಜಯೀಂದ್ರಗುರು-ಸಾರ್ವಭೌಮರು ಅದನ್ನು ಖಂಡನೆ ಮಾಡಿರುವ ರೀತಿ, ಅವುಗಳಿಗಿರುವ ವ್ಯತ್ಯಾಸ ಎಲ್ಲವನ್ನೂ ವಿಸ್ತಾರವಾಗಿ ಬರೆದು ಉಪನ್ಯಾಸ ಮಾಡಿ ನೀಡುತ್ತೇನೆ.

ಅಷ್ಟೇ ಅಲ್ಲ, ತರಂಗಿಣಿ, ಕಂಟಕೋದ್ಧಾರಗಳ ವಿಮರ್ಶೆ ಮುಂದಿನ  ಅದ್ವೈತ ಗ್ರಂಥಗಳಲ್ಲಿ ಬಂದವು. ಆದರೆ ವಿಜಯೀಂದ್ರರ ಗ್ರಂಥಗಳಲ್ಲಿ ಪ್ರತಿಯೊಂದು ವಾದದ ಮೂಲಕ್ಕೇ ಕುಠಾರವಿದೆ. ಮುಂದಿನವರು ಪ್ರಶ್ನೆ ಮಾಡದ ರೀತಿಯಲ್ಲಿ ಉತ್ತರಗಳನ್ನು ನೀಡಿದವರು ಶ್ರೀ ವಿಜಯೀಂದ್ರಗುರುಸಾರ್ವಭೌಮರು. ಅದಕ್ಕಾಗಿಯೇ ಮುಂದಿನ ಅದ್ವೈತಿಗಳು ವಿಜಯೀಂದ್ರರ ವಾಕ್ಯಗಳನ್ನು ಖಂಡನೆ ಮಾಡುವ ಸಾಹಸಕ್ಕೆ ಕೈಹಾಕಲಿಲ್ಲ. ಕಾರಣ, ಪ್ರತಿಯೊಂದು ಪ್ರಶ್ನೆಗೂ ಅಂತಿಮ ಉತ್ತರವನ್ನು ನ್ಯಾಯಾಮೃತದಿಂದಲೇ ತೆಗೆದು ತೋರಿಸಿ ತಮ್ಮ ಗುರುಗಳ ಅನ್ಯಾದೃಶ ಸೇವೆಯನ್ನು ಮಾಡಿದ ಮಹಾನುಭಾವರು ಶ್ರೀ ವಿಜಯೀಂದ್ರರು.

**ಅನುಕ್ತಕಥನಾತ್ ಕ್ವಾಪಿ ಎನ್ನುವ ವ್ಯಾಸರಾಜರ ಮಾತೇ ತಪ್ಪು ಎನ್ನುವ,**

**ಅದನ್ನು ವರದಾಚಾರ್ಯರು ವ್ಯಾಸರಾಜರ ಎದುರಿನಲ್ಲೇ ಖಂಡಿಸಿದರು ಎಂದು ಪ್ರಲಾಪ ಮಾಡುವ,**

**ವ್ಯಾಸರಾಜರ ಶಿಷ್ಯರಿಗೆ ಅದ್ವೈತಸಿದ್ಧಿಗೆ ಉತ್ತರ ನೀಡುವ ಸಾಮರ್ಥ್ಯ ಇರಲಿಲ್ಲ ಎಂದು ಸುಳ್ಳು ಕಥೆಗಳನ್ನು ಹುಟ್ಟಿಸುವ**

**ಉತ್ತರಾದಿಮಠದ ಜನ ತಾವು ವ್ಯಾಸರಾಜರ ಭಕ್ತರು ಎಂದು ಹೇಳಿಕೊಳ್ಳುವದರಲ್ಲಿ ಎಷ್ಟು ಸತ್ಯಾಂಶವಿದೆ ಎನ್ನುವದನ್ನು ಆತ್ಮಾವಲೋಕನ ಮಾಡಿಕೊಳ್ಳಲಿ.**

ಮುಂದಿನ ದಿವಸಗಳಲ್ಲಿ ಸಪ್ರಮಾಣವಾಗಿ ಇದನ್ನು ಪ್ರತಿಪಾದಿಸುತ್ತೇನೆ ಸಹಿತ.

ನರಹರಿಸುಮಧ್ವ ಅವರು ನ್ಯಾಯಾಮೃತದ ಸೇವೆ ಮಾಡಲು ಹೇಳಿದ್ದಾರೆ. ಅವಶ್ಯವಾಗಿ ಈ ಸೇವೆ-ಯನ್ನು ಸಂಪೂರ್ಣವಾಗಿ ಸಮಗ್ರ ದಾಸಪರಂಪರೆ, ಯತಿಪರಂಪರೆಯ ಕಾರುಣ್ಯದಿಂದ ನನ್ನ ಗುರುಗಳ ಅನುಗ್ರಹದಿಂದ ಮಾಡುವಂತಾಗಲಿ ಎಂದು ಅವರೆಲ್ಲರನ್ನೂ ಪ್ರಾರ್ಥಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ